**KARNATAK UNIVERSITY, DHARWAD**
**ACADEMIC (S&T) SECTION**
**ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ**
**ವಿದ್ಯಾಮಂಡಳ (ಎಸ್&ಟಿ) ವಿಭಾಗ**

ಸ್ವಾತಂತ್ರ್ಯದ ಅಮೃತ ಮಹೋತ್ಸವ
Tele: 0836-2215224
e-mail: academic.st@kud.ac.in
Pavate Nagar,Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

No. KU/Aca(S&T)/SSL-394A/2022-23/40

Date: 29 APR 2023

## ಸುತ್ತೋಲೆ

ವಿಷಯ: ರಾಷ್ಟ್ರೀಯ ಶಿಕ್ಷಣ ನೀತಿ–2020ಕ್ಕೆ ಪೂರಕವಾಗಿರುವ Open Elective Course ವಿಷಯವನ್ನು ಬೋಧಿಸಲು ಹಾಗೂ ಸಂಯೋಜನೆ ಅವಶ್ಯಕತೆಯ ಬಗ್ಗೆ ನಿರ್ದೇಶನ ನೀಡಿರುವ ಕುರಿತು.

ಉಲ್ಲೇಖ:1. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು–2) ಬೆಂಗಳೂರು, ಇವರ ಪತ್ರ ಸಂ. ಇ.ಸಂ: ಇಡಿ 112 ಯುಕೆವಿ 2022, ದಿನಾಂಕ: 17.04.2023.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 28/04/2023

------

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲಾ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳಲ್ಲಿ 2021–22ನೇ ಸಾಲಿನಿಂದ ಜಾರಿಯಲ್ಲಿರುವ ಎಲ್ಲಾ ಸ್ನಾತಕ ಪದವಿ ಕೋರ್ಸುಗಳಿಗೆ ರಾಷ್ಟ್ರೀಯ ಶಿಕ್ಷಣ ನೀತಿ–2020ಕ್ಕೆ ಪೂರಕವಾಗಿರುವ Open Elective Course ವಿಷಯವನ್ನು ಬೋಧಿಸಲು ಮತ್ತು ಸದರಿ ವಿಷಯಗಳ ಸಂಯೋಜನೆಯ ಅವಶ್ಯಕತೆಯ ಕುರಿತಂತೆ ಕೆಲವು ಅಂಶಗಳ ಬಗ್ಗೆ ಸರ್ಕಾರದ ನಿರ್ದೇಶನಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಉಲ್ಲೇಖ 01 ರಲ್ಲಿ ತಿಳಿಸಿದಂತೆ ಸದರ ವಿಷಯವನ್ನು ಸರ್ಕಾರವು ಪರಿಶೀಲಿಸಿ ಈ ಕೆಳಗಿನಂತೆ ನಿರ್ದೇಶನ ನೀಡಿರುತ್ತಾರೆ.

1. ರಾಜ್ಯದಲ್ಲಿ 2021–22ನೇ ಸಾಲಿನಿಂದ ರಾಷ್ಟ್ರೀಯ ಶಿಕ್ಷಣ ನೀತಿ–2020 ಯನ್ನು ಅನುಷ್ಠಾನಗೊಳಿಸಿದ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯಗಳು ಕಾಲೇಜುಗಳಲ್ಲಿ ನಡೆಸುವ ವಿವಿಧ ಪದವಿಗಳ ವಿಷಯವಾರು ಸಂಯೋಜನೆಯನ್ನು ನೀಡುತ್ತಿವೆ. ಸಂಯೋಜನೆ ಹೊಂದಿದ ವಿಷಯಗಳಲ್ಲಿ Open Elective Courseಗೆ ಸಂಬಂಧಿಸಿದ ವಿಷಯ ಒಳಗೊಂಡಿದ್ದರೆ, ಪ್ರತ್ಯೇಕವಾಗಿ ಸಂಯೋಜನೆ ಪಡೆಯುವ ಅಗತ್ಯವಿಲ್ಲ. ಆದರೆ ಸಂಯೋಜನೆ ಹೊಂದಿದ ವಿಷಯಗಳನ್ನು ಹೊರತುಪಡಿಸಿ Open Elective Courseಗಳನ್ನು ಬೋಧಿಸುತ್ತಿದ್ದರೆ ಅಂತಹ ವಿಷಯಗಳಿಗೆ ಸಂಯೋಜನೆಯನ್ನು ಪಡೆಯಬೇಕಾಗುತ್ತದೆ.
2. ಒಂದು ವೇಳೆ ಕಾಲೇಜುಗಳು ಸಂಯೋಜನೆ ಪಡೆಯದ ಯಾವುದೇ ವಿಷಯದ Open Elective Courseನ್ನು ಕಾಲೇಜುಗಳು ಬೋಧಿಸಲು ಇಚ್ಚಿಸಿದರೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಅದಕ್ಕೆ ಬೇಕಾದ ವ್ಯವಸ್ಥೆ ಕಲ್ಪಿಸಿ (BoS, BoE ಇತ್ಯಾದಿ) ಕಾಲೇಜುಗಳಿಗೆ ಅನುವು ಮಾಡಿಕೊಡಬಹುದು.
3. ಎರಡನೆಯದಾಗಿ, ಗ್ರಂಥಪಾಲಕರು ಹಾಗೂ 'ಶಾರೀರಿಕ ಶಿಕ್ಷಕರು ನೇಮಕವಾಗಿರುವುದು ಅವರದೇ ಆದ ಪ್ರತ್ಯೇಕ ಕೆಲಸ ಕಾರ್ಯಗಳ ನಿರ್ವಹಣೆಗಾಗಿ, ಅವರನ್ನು Open Elective Courseಗಳ ಬೋಧನಾ ಕಾರ್ಯಗಳಿಗೆ ಬಳಸಿಕೊಂಡರೆ ಅವರ ಮೂಲ ಕೆಲಸ ಕಾರ್ಯಗಳು ಕುಂಠಿತಗೊಳ್ಳುತ್ತವೆ.

ಪು.ತಿ.ನೋ.

4. ಅಲ್ಲದೆ, Open Elective Courseಗಳ ಜೊತೆಗೆ ಪದವಿ ಪ್ರೋಗ್ರಾಂಗಳಲ್ಲಿ Value Based Courses (Sports, Health & Wellness, NCC NSS. Scouts & Guides ಇತ್ಯಾದಿ) ಗಳನ್ನು ಅಳವಡಿಸಿರುವುದರಿಂದ ಇವುಗಳನ್ನು ಬೋಧಿಸುವ ಜವಾಬ್ದಾರಿ ಕಾಲೇಜುಗಳಲ್ಲಿ ಶಾರೀರಿಕ ಶಿಕ್ಷಕರು (Physical Education Directors / Instructors) ನಿರ್ವಹಿಸಬೇಕಾಗುತ್ತದೆ. ಜೊತೆಗೆ ಅವರು Open Elective ವಿಷಯಗಳನ್ನು ಬೋಧಿಸಲು ಯು.ಜಿ.ಸಿ. ನಿಯಮಗಳನುಸಾರ ಶಿಕ್ಷಕರ ನೇಮಕಾತಿಗೆ ಇರಬೇಕಾದ ವಿದ್ಯಾರ್ಹತೆಯನ್ನು ಹೊಂದಿರಬೇಕಾಗುತ್ತದೆ. ವಿದ್ಯಾರ್ಹತೆ ಹೊಂದಿದ್ದರೂ ಸಹ, ಮೇಲೆ ಹೇಳಿರುವಂತೆ ಅವರು ಮೂಲ ಕೆಲಸದ ಹೊರೆಗೆ (Workload) ತೊಂದರೆಯಾಗುತ್ತದೆ ಎಂದು ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ನಿರ್ದೇಶಿಸಿದ್ದಾರೆ.

ಆದ್ದರಿಂದ, ಸಂಬಂಧಪಟ್ಟ ಎಲ್ಲ ಪ್ರಾಚಾರ್ಯರು ಈ ಮೇಲಿನಂತೆ ಅಗತ್ಯ ಕ್ರಮ ಕೈಗೊಳ್ಳಲು ಈ ಮೂಲಕ ತಿಳಿಸಲಾಗಿದೆ.

ಅಡಕ: ಮೇಲಿನಂತೆ

ಕುಲಸಚಿವರು.

ಗೆ,

1. ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-1), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು-560001.
2. ಡಾ. ಎಸ್.ಎಂ.ತುವಾರ, ಮುಖ್ಯ ನೊಡಲ್ ಅಧಿಕಾರಿ ಮತ್ತು ಸಹಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ.
3. ಡಾ. ಎಸ್.ಶಿವಶಂಕರ, ಯು.ಯು.ಸಿ.ಎಂ.ಎಸ್. ನೊಡಲ್ ಅಧಿಕಾರಿಗಳು, ಕ.ವಿ.ವಿ. ಧಾರವಾಡ.
4. ನಿರ್ದೇಶಕರು, ಸಿ.ಡಿ.ಸಿ. ವಿಭಾಗ, ಕ.ವಿ.ವಿ. ಧಾರವಾಡ.
5. ನಿರ್ದೇಶಕರು, ಐ.ಟಿ. ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
6. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
7. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
8. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.